> ಪ್ರಪಂಚ ಅವನ ಒಳ್ಳೆಯತನ ಮತ್ತು ಪ್ರಾಮಾಣಿಕತೆಯ ಲಾಭವನ್ನು ಪಡೆಯಲಿಲ್ಲ. ಆ ಹೃದಯವಿದ್ರಾವಕ ಸ್ಥಿತಿಯಲ್ಲೂ ಆತ ತನ್ನ ಸುಟ್ಟು ಕರಿಕಲಾದ ಮುಖವನ್ನು ಮೇಲೆತ್ತಿ ತನ್ನ ದುರ್ಬಲ ಕಣ್ಣಿನಿಂದ ನನ್ನ ಕಣ್ಣುಗಳನ್ನು ನೋಡಿ ನನಗೆ ಧನ್ಯವಾದ ಹೇಳಿದ.

ಬಂದು ನಮ್ಮ ಓಣಿಯ ಪಕ್ಕದಿಂದ ಇಪ್ಪತ್ತು ಜನ ಆರೋಗ್ಯವಂತ ಜನರನ್ನ, ಆಮೇಲೆ ಒಬ್ಬ ರೋಗೀನ ಎತ್ಕೊಂಡ್ ಹೋಯ್ತು.'

'ಇಪ್ಪತ್ತು, ಮತ್ತೆ ಒಂದು? ಆಂಬುಲೆನ್ಸ್‌ನಲ್ಲಿ?' ನಾನು ನಂಬಲಾರದೆ ಒತ್ತಿ ಒತ್ತಿ ಕೇಳಿದೆ.

'ಹೂಂ ಸ್ವಾಮೀ! ಇಪ್ಪತ್ತು ಮತ್ತು ಇನ್ನೊಂದು. ಅವ್ರನ್ನೆಲ್ಲ 'ಕೋಂಟೀನ್'ಗೆ ಕರ್ಕೊಂಡು ಹೋಗ್ತಾರೆ?! ಅಯ್ಯೋ! ಪಾಪ ಅವ್ರು ಮತ್ತೆ ಯಾವತ್ತೂ ಕೋಂಟೀನ್‌ನಿಂದ ವಾಪಸ್ ಬರಲ್ವ?'

ವಿಚಾರಿಸಿದಾಗ ಗೊತ್ತಾಯಿತು, ಭಾಗು ರಾತ್ರಿ ಮೂರು ಗಂಟೆಗೆ ಎಚ್ಚರಗೊಳ್ಳುತ್ತಾನೆ. ನಂತರ ಅರ್ಧ ಕ್ವಾರ್ಟರ್ ಶರಾಬು ಕುಡಿದು ನಗರದ ಸ್ವಚ್ಛತಾ ಕಮಿಟಿಯ ಆದೇಶದ ಮೇರೆಗೆ ಬೀದಿಗಳಲ್ಲಿ ಮತ್ತು ಚರಂಡಿಗಳಲ್ಲಿ ವೈರಾಣು ಹರಡದಿರಲೆಂದು ಸುಣ್ಣ ಸಿಂಪಡಿಸಲು ಪ್ರಾರಂಭಿಸುತ್ತಾನೆ. ಅವನು ಮೂರು ಗಂಟೆಗೆ ಏಕೆ ಎಚ್ಚರಗೊಳ್ಳುತ್ತಾನೆ? ಅದಕ್ಕೆ ಕಾರಣವನ್ನೂ ಭಾಗು ನನಗೆ ಹೇಳಿದ – ಮಾರುಕಟ್ಟೆಯಲ್ಲಿ ಬೀಳುವ ಶವಗಳನ್ನು ಒಟ್ಟುಗೂಡಿಸುವುದಕ್ಕೆ ಮತ್ತು ರೋಗದ ಭಯದಿಂದ ಹೊರಗೆ ಬರಲು ಹೆದರುವವರ ಸಣ್ಣಪುಟ್ಟ ಕೆಲಸಗಳನ್ನು ಮಾಡುವುದಕ್ಕೆ. ಭಾಗು ಕಾಯಿಲೆಗೆ ಒಂಚೂರೂ ಹೆದರುತ್ತಿರಲಿಲ್ಲ. ಒಂದು ವೇಳೆ ಸಾವು ಬಂದರೆ, ತನ್ನ ಜೀವ ಎಲ್ಲೇ ಇದ್ದರೂ ಅದರಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂಬುದು ಭಾಗುವಿನ ವಾದವಾಗಿತ್ತು.

ಆ ದಿನಗಳಲ್ಲಿ, ಯಾರೂ ಒಬ್ಬರ ಹತ್ತಿರ ಒಬ್ಬರು ಬರುತ್ತಿರಲಿಲ! ಆಗಲೂ ಭಾಗು ತಲೆ ಮತ್ತು ಮುಖಕ್ಕೆ ಮುಂಡಾಸು ಸುತ್ತಿಕೊಂಡು ಸ್ವಾರ್ಥಿಗಳಿಗೂ ಸೇವೆ ಮಾಡುತ್ತಿದ್ದ. ಭಾಗುವಿಗೆ ಓದು ಬರಹ ಗೊತ್ತಿರಲಿಲ್ಲ. ಆದರೆ ತನ್ನ ಸ್ವಂತ ಅನುಭವದ ಮೇಲೆ ಒಬ್ಬ ಒಳ್ಳೆಯ ಭಾಷಣಕಾರನಂತೆ ಕಾಯಿಲೆಯಿಂದ ರಕ್ಷಿಸಿಕೊಳ್ಳುವ ವಿಧಾನಗಳನ್ನು ಜನರಿಗೆ ತಿಳಿ ಹೇಳುತ್ತಿದ್ದ. ಸಾಮಾನ್ಯ ಸ್ವಚ್ಛತೆಯನ್ನು ಕಾಪಾಡುವುದರ ಬಗ್ಗೆ, ಸುಣ್ಣ ಸಿಂಪಡಿಸುವುದರ ಬಗ್ಗೆ ಮತ್ತು ಮನೆಯಿಂದ ಹೊರಗೆ ಬರದಿರುವ ಬಗ್ಗೆ ಹೆಚ್ಚು ಒತ್ತು ಕೊಟ್ಟು ಹೇಳುತ್ತಿದ್ದ. 'ಸಾಧ್ಯವಾದಷ್ಟೂ ಮದ್ಯಪಾನ ಮಾಡಿ' ಎಂದು ಅವನು ಒಂದು ದಿನ ಜನರಿಗೆ ಹೇಳುತ್ತಿದ್ದನ್ನೂ ನಾನು ನೋಡಿದೆ.

ಒಮ್ಮೆ ಅವನು ಬಂದಾಗ, 'ಭಾಗೂ ನಿನಗೆ ಪ್ಲೇಗ್ ಅಂದ್ರೆ ಹೆದ್ರಿಕೆ ಆಗಲ್ವಾ?' ಅಂದೆ.

'ಇಲ್ಲ ಸ್ವಾಮಿ! ಶರಾಬು ಇಲ್ದೆ ಒಂದ್ ಎಲೆ ಸಹ ಅಲ್ಲಾಡಲ್ಲ. ನೀವು ಇಷ್ಟು ದೊಡ್ಡ ಡಾಕುಟ್ರು. ಸಾವಿರಾರು ಜನ ನಿಮ್ಮ ಕೈಯಿಂದ ಗುಣ ಆಗಿದ್ದಾರೆ. ಆದ್ರೆ ನನ್ನ ಶರಾಬು ಇದ್ರೆ ನಿಮ್ಮ ಔಷಧಿ ಗಿವ್ಷಧಿ ಏನೂ ಬೇಕಾಗಿಲ್ಲ ಹೂಂ ಸ್ವಾಮೀ! ನಿಜ ನಾನು ಸರಿಯಾಗಿ, ಗ್ಯಾರಂಟಿಯಾಗಿ ಸತ್ಯ ಹೇಳ್ತಾ ಇದ್ದೀನಿ' ಅಂದ.

ಆಮೇಲೆ ಚರ್ಚೆಯ ದಿಕ್ಕು ಬದಲಾಯಿಸಿ, 'ಸ್ವಾಮೀ! ಈ ಕೋಂಟೀನ್ ಬಗ್ಗೆ ಏನಾರೂ ಹೇಳಿ, ಅದೇ ಕೋಂಟೀನ್!' ಅಂದ.

'ಅಲ್ಲಿ ಕ್ವಾರಂಟೈನ್‌ನಲ್ಲಿ ಸಾವಿರಾರು ರೋಗಿಗಳು ಇದಾರೆ. ನಮ್ಮ ಕೈಲಾದಷ್ಟು ಚಿಕಿತ್ಸೆ ಕೊಡ್ತೀವಿ. ಆದ್ರೆ ಎಲ್ಲೀವರೆಗೆ ಕೊಡ್ತೀವಿ? ನನ್ನ ಜೊತೆ ಕೆಲಸ ಮಾಡುವ ನರ್ಸು ಕೂಡ ಅವರ ನಡುವೆ ತುಂಬ